Number of Schools and Colleges in Shimoga District

865. Sri A. R. BADRINARAYAN (Shimoga).—

Will the Minister for Education be pleased to state :—

(*a*) the number of Primary, Semi-Primary, High Schools, Colleges including Professional and Technical in the Shimoga District (both Government and Private) ;

(*b*) the total number of students in each of them ;

(*c*) the total number of students passing out of each of them in the current year ?

Sri N. M. KOTRABASAIAH SOGI (Deputy Minister for Education).-

(*a*)—	*Government*	*Private (Aided)*
Lower Primary ...	1,315	8
Higher Primary ...	503	13
High Schools ...	9	76
Technical School ...	1	...
Colleges ...	1	8
Technical Colleges ...	...	...
Polytechnics ...	...	1
	1,829	106

(*b*) Junior Primary Schools ...	82,019
Higher Primary Schools ...	85,322
High Schools ...	23,806
S.J.Polytechnic ...	305
Junior Technical Schools ...	126
Colleges ...	3,688

(*c*) The annual examinations are yet to be held.

Sri A. R. BADRINARAYAN.—Sir, I had asked for districtwise figures for the whole State in my question. The question has been modified so as to confine it to Shimoga District only. I wanted figures for the whole State.

Mr. SPEAKER.—That was done probably to enable the hon. Member to get the answer quickly. Otherwise the answer would have been delayed. The hon. member may follow up the present question.

Sri A. R. BADRINARAYAN.—The very purpose of putting that question is defeated, Sir.

Mr. SPEAKER.—That cannot be helped.

Sri A. R. BADRINARAYAN.—Can the Hon. Minister now at least be pleased to give information about the number of students passing out of the various schools and Colleges in the State including technical colleges ?

Sri N. M. KOTRABASAIAH SOGI.—Statewise figures are not available with me now, Sir.

Sri A. R. BADRINARAYAN.—My idea in putting the question was to know what has been done by the Government in the matter of providing employment to all the students who pass out of these colleges including technical colleges and whether from that point of view, the Government will considar the reorientation of the studies prescribed in educational institutions ?

Sri N. M. KOTRABASAIAH SOGI.—It is the obligatory duty of the Government to provide education to all children, but not to provide employment to all those who get degrees and go out of the Colleges. Anyway Government is doing all that is possible to provide employment opportunities to all qualified candidates.

Sri A. R. BADRINARAYAN.—My point is whether it is not the obligation of the Government to provide such education as would be useful to the Students in their future life ?

Sri N. M. KOTRABASAIAH SOGI.—Sir, it is my humble opinion that it would not be possible for any Government to provide employment to all the graduates who come out of the colleges every year. Anyway, Government, as I said earlier, is doing all that is possible to create employment opportunities to as many of the technical graduates as possible.

Sri A. R. BADRINARAYAN.—Is it the attitude of the Government not to create a situation by which unemployment will stare in the face of the young people passing out of the schools and colleges ?

Sri N. M. KOTRABASAIAH SOGI.—Sir, the Government is aware of the acute problem of unemployment in the State. Anyway, Government is also doing all it can to provide opportunities of employment; and even in private institutions, graduates are being absorbed and they are getting employment. It may not be practicable nor will it be possible to provide employment to all graduates who come out of colleges every year. Thousands of graduates come out every year but Government can provide employment only to a limited number.

ಶ್ರೀ ಎಚ್. ಬಿ. ಹ್ಯಾಲನಯ್ಯ,—ಒಬ್ಬ ವೈದ್ಯ ವಿದ್ಯಾರ್ಥಿಗೆ 25 ಸಾವಿರ ರೂಪಾಯಿಗಳನ್ನು ಮತ್ತು ಇಂಜನಿಯರಿಂಗ್ ಕಾಲೇಜಿನ ಒಬ್ಬ ವಿದ್ಯಾರ್ಥಿಗೆ 10-15 ಸಾವಿರ ರೂಪಾಯಿಗಳನ್ನು ಈಗ ಖರ್ಚುಮಾಡಬೇಕಾಗುತ್ತದೆ. ಆದುದರಿಂದ ಈ ಕೋರ್ಸುಗಳನ್ನು ತೆಗೆದುಕೊಳ್ಳುವುದಕ್ಕೆ ಬರುವ ವೈದ್ಯ ವಿದ್ಯಾರ್ಥಿಗೆ 25 ಸಾವಿರ ರೂಪಾಯಿಗಳನ್ನೂ ಮತ್ತು ಇಂಜನಿಯರಿಂಗ್ ಕಾಲೇಜ್ ವಿದ್ಯಾರ್ಥಿಗೆ 10-15 ಸಾವಿರ ರೂಪಾಯಿಗಳನ್ನು ಸರ್ಕಾರದವರೇ ಮುಂಗಡವಾಗಿ ಮಂಜೂರು ಮಾಡಿ ಕೊಟ್ಟು ಅವರಿಗೆ ಜೀವನದಲ್ಲಿ ಮುಂದೆ ನೌಕರಿ ದೊರೆಯುವುದಕ್ಕೆ ತಕ್ಕ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಯಾವ ವಿದ್ಯಾರ್ಥಿಗೇ ಆಗಲೀ ಇಂತಹ ಕೋರ್ಸ್ ಓದಬೇಕೆಂದು ಒತ್ತಾಯಮಾಡುವುದಕ್ಕಾಗುವುದಿಲ್ಲ. ಅವರು ಮೆಡಿಕಲ್‌ಗೆ ಆಗಲೀ. ಇಂಜನಿಯರಿಂಗಿಗೇ ಆಗಲೀ ಹೋಗಬಹುದು. ಅದು ಅವನ ಮೆರಿಟ್ ಮೇಲೆ ಹೋಗುತ್ತದೆ. ಅದನ್ನು ನಾವು ಹೇಳುವುದಿಲ್ಲ. ವಿದ್ಯಾಭ್ಯಾಸಕ್ಕಾಗಿ ಖರ್ಚನ್ನು ಒದಗಿಸಲು ಸರ್ಕಾರದವರ ಕರ್ತವ್ಯ ಎಂದಾಕ್ಷಣಕ್ಕೆ ವಿದ್ಯಾವಂತರೆಲ್ಲರಿಗೂ ನೌಕರಿ ಒದಗಿಸಬೇಕೆಂದರೆ ಬಹಳ ಕಷ್ಟವಾಗುತ್ತದೆ. ಎಲ್ಲರಿಗೂ ನೌಕರಿ ಕೊಡಬೇಕೆಂದು ಶಿಕ್ಷಣ ಕ್ಷೇತ್ರಕ್ಕೆ ಇಷ್ಟು ಖರ್ಚುಮಾಡುತ್ತಾ ಇಲ್ಲ.

ಶ್ರೀ ಎ. ಎನ್. ಪಾಟೀಲ್.—ಹಾಗಾದರೆ ಸರ್ಕಾರದವರು ಯಾವ ತರಹ ಜಾಬ್ ಆಪರ್ಚ್ಯುನಿಟೀಸ್ ಕ್ರಿಯೇಟ್ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ರಾಜ್ಯದಲ್ಲಿ ಅನೇಕ ವಿಧವಾದ ಕೈಗಾರಿಕೆಗಳು ಪ್ರಾರಂಭವಾಗಿವೆ. ಸಾರ್ವಜನಿಕ ಕ್ಷೇತ್ರಗಳಲ್ಲಿಯೂ ಮತ್ತು ಖಾಸಗಿ ಕ್ಷೇತ್ರಗಳಲ್ಲಿಯೂ ಬೇಕಾದಷ್ಟು ಕೈಗಾರಿಕೆಗಳು ಪ್ರಾರಂಭವಾಗಿವೆ. ನಾವು ಈಗಾಗಲೇ ನಮ್ಮ ರಾಜ್ಯದಲ್ಲಿ ತಾಂತ್ರಿಕ ಪದವೀಧರರಾಗಿರುವ ವಿದ್ಯಾರ್ಥಿಗಳಿಗೆ ಎಲ್ಲಾ ವಿಧವಾದ ನೌಕರಿ ಅವಕಾಶವನ್ನು ಮಾಡಿಕೊಡಬೇಕೆಂದು ಅನೇಕ ಕೈಗಾರಿಕಾ ಸಂಸ್ಥೆಗಳವರಿಗೆ ಒತ್ತಾಯಮಾಡಿ ಹೇಳುತ್ತಿದ್ದೇನೆ. ಖಾಸಗೀ ಸಂಸ್ಥೆಗಳಲ್ಲಿ ನೌಕರಿ ಸಾಕಷ್ಟು ದೊರಕುತ್ತಾ ಇಲ್ಲ. ಸಾರ್ವಜನಿಕ ಸಂಸ್ಥೆಗಳಲ್ಲಿ ಅನೇಕ ವಿಧವಾಗಿ ನೌಕರಿಗಳು ದೊರೆಯುತ್ತಾ ಇವೆ.

Sri A. R. BADRINARAYAN.—Is the Government satisfied that the type of Education that is imparted to our students is the one which will be useful for them ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಮೂಲಭೂತವಾದ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ವಿದ್ಯಾರ್ಥಿಗಳಿಗೆ ಕೊಡತಕ್ಕಂಥ ಶಿಕ್ಷಣ ಸಾರ್ಥಕವಾಗುತ್ತಿದೆ ಎನ್ನುವ ಬಗ್ಗೆ ಶಿಕ್ಷಣ ತಜ್ಞರ ಅನೇಕ ವಿಧವಾದ ಅಭಿಪ್ರಾಯಗಳು ಇವೆ. ಅದೂ ಅಲ್ಲದೆ ಇತ್ತೀಚೆಗೆ ಶ್ರೀ ರಾಧಾಕೃಷ್ಣನ್ ಅವರ ಆಯೋಗ ಮತ್ತು ಕೊಠಾರಿ ಆಯೋಗದವರು ಶಿಕ್ಷಣದ ಬಗ್ಗೆ ಮಾಡಿರತಕ್ಕ ಶಿಫಾರಸ್ಸುಗಳನ್ನು ಗಣನೆಗೆ ತೆಗೆದುಕೊಂಡು ಅದರಲ್ಲಿ ಅನೇಕ ಶಿಫಾರಸ್ಸುಗಳನ್ನು ನಾವು ಈಗಾಗಲೇ ಅಳವಡಿಸಿಕೊಂಡಿದ್ದೇವೆ. ಈಗ ಮೂಲಭೂತವಾಗಿ ಒಪ್ಪಿಕೊಂಡ ಶಿಫಾರಸ್ಸುಗಳನ್ನು ಕಾಲಕ್ರಮೇಣ ಸಾಧ್ಯವಾದಮಟ್ಟಿಗೆ ಜಾರಿಗೆ ತರುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ನಿರುದ್ಯೋಗಿಗಳಾಗಿರುವ ಇಂಜಿನಿಯರಿಂಗ್ ಪದವೀಧರರು ಹಾಗೂ ಡಿಪ್ಲೊಮಾ ಹೋಲ್ಡರುಗಳನ್ನು ಇಷ್ಟು ಜನಗಳನ್ನು ಹುದ್ದೆಗಳು ಖಾಲಿ ಆದಂತೆ ನೇಮಿಸಿಕೊಳ್ಳಬೇಕೆಂದು ರಾಜ್ಯದಲ್ಲಿರುವ ಎಲ್ಲಾ ಖಾಸಗೀ ಮತ್ತು ಸರ್ಕಾರಿ ಕೈಗಾರಿಕಾ ಸಂಸ್ಥೆಗಳಿಗೂ ತಿಳಿಸುವಂತೆ ಒಂದು ಕಾನೂನು ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ರೀತಿ ಕಡ್ಡಾಯವಾಗಿ ಕಾನೂನು ಮಾಡತಕ್ಕಂಥದಾದ್ದು ಕಷ್ಟವಾಗಬಹುದು. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಕೈಗಾರಿಕಾ ಸಂಸ್ಥೆಗಳಲ್ಲಿ ಆ ರೀತಿಯಾದಂಥ ಒಂದು ನೀತಿಯನ್ನು ತರಬಹುದು. ಆದರೆ ಕೇಂದ್ರ ಸರ್ಕಾರದ ಆಡಳಿತದಲ್ಲಿರತಕ್ಕ ಮತ್ತು ಖಾಸಗಿಯವರ ಆಡಳಿತದಲ್ಲಿರತಕ್ಕ ಸಂಸ್ಥೆಗಳಿಗೆ ಆ ರೀತಿ ಕಡ್ಡಾಯ ಮಾಡುವುದು ಕಷ್ಟವಾಗುತ್ತದೆ. ಆದರಲ್ಲಿಯೂ ಎಲ್ಲರಿಗೂ ಕೆಲಸ ಸಿಕ್ಕುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಇಟರ್‌ವ್ಯೂನಲ್ಲಿ ಅರ್ಹರಾದ ವಿದ್ಯಾರ್ಥಿಗಳಿಗೆ ನೌಕರಿ ಕೊಡುವಂಥ ಪದ್ಧತಿ ಇದೆ.

ಶ್ರೀ ಬಿ. ಎಂ. ಇದಿನಬ್ಬ.—ಡಾಕ್ಟರ್, ಇಂಜಿನಿಯರಿಂಗ್ ಯಾವುದೇ ಒಂದು ಪದವಿಯನ್ನು ಪಡೆದುಕೊಂಡು ಹೊರಗಡೆ ಬಂದವರಿಗೆ ಸರ್ಕಾರದವರು ಕೆಲಸ ಕೊಡುವ ಒಂದು ಮೂಲಭೂತ ನಿಯಮವನ್ನು ಇಟ್ಟುಕೊಂಡಿದ್ದೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದು ಸರ್ಕಾರದ ಮೂಲಭೂತವಾದ ಅಥವಾ ಅಬ್ಲಿಗೇಟರಿ ಡ್ಯೂಟಿ ಅಲ್ಲ. ಸಾಧ್ಯವಾದಮಟ್ಟಿಗೆ ಅವರಿಗೆ ಸರ್ಕಾರದವರು ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡುತ್ತಾರೆ.